
ಕಥೋಪದೇಶ

# ದೇವರ ಮುಗುಳುನಗೆ



ಹಿಂದೆ ಒಂದು ರಾಜ್ಯದಲ್ಲಿ ತನ್ನ ಪ್ರಜೆಗಳನ್ನು ಪ್ರೀತಿಸುತ್ತಿದ್ದ ಒಬ್ಬ ರಾಜನಿದ್ದ. ಸಾತ್ವಿಕ ಸ್ವಭಾವದವನೂ ಆಗಿದ್ದ ಅವನು ದೇವರಲ್ಲಿ ಬಹಳ ಶ್ರದ್ಧೆಯುಳ್ಳವನಾಗಿದ್ದ. ರಾಜ್ಯದ ಕೆಲಸ ಎಷ್ಟೇ ಇರಲಿ, ದೇವರನ್ನು ಮರೆಯದೆ ಭಕ್ತಿಯಿಂದ ಪೂಜಿಸುತ್ತಿದ್ದ. ಹೀಗಿರುವಾಗ ದೇವರು ಅವನ ಭಕ್ತಿಯನ್ನು ಮೆಚ್ಚಿ, ದರ್ಶನವಿತ್ತ. ರಾಜನಿಗೆ ಪರಮಾನಂದವಾಯಿತು. ದೇವರು, "ರಾಜ, ನಿನ್ನ ಭಕ್ತಿಗೆ ಮೆಚ್ಚಿದೆ. ನಿನಗೆ ಬೇಕಾದ ವರವನ್ನು ಕೇಳಿಕೊ" ಎಂದ. ಅದಕ್ಕೆ ರಾಜನು ಹೇಳಿದ : "ನನಗೇನೋ ನಿನ್ನ ದರ್ಶನವಾಗಿ ನನ್ನ ಜನ್ಮ ಸಾರ್ಥಕವಾಯಿತು. ನಿನ್ನ ದರ್ಶನದ ನಂತರ, ನನಗೆ ಇನ್ನೇನು ಬೇಕು ಪ್ರಭು? ನಾನು ಸಂತೃಪ್ತನಾಗಿರುವೆ. ನೀನು ವರ ಕೊಡುವುದೇ ಆದರೆ ನನ್ನ ಪ್ರಜೆಗಳಿಗೂ ಸಹ ನೀನು ದರ್ಶನ ನೀಡಬೇಕೆಂಬುದೇ ನನ್ನ ಕೋರಿಕೆ."

ದೇವರು ಏನನ್ನೂ ಹೇಳದೆ, ಮುಗುಳುನಕ್ಕ. ಮತ್ತೆ ಮತ್ತೆ ರಾಜ ಈ ರೀತಿ ಕೋರಿಕೊಂಡಾಗ, ದೇವರು "ಸರಿ, ನಾಳೆ ಎಲ್ಲರನ್ನೂ ಊರಾಚೆ ಕರೆದುಕೊಂಡು ಬಾ" ಎಂದ.

ಮರುದಿನ, ರಾಜ ಎಲ್ಲರನ್ನೂ ಕರೆದು, "ದೇವರ ದರ್ಶನಕ್ಕಾಗಿ ಹೋಗೋಣ ಬನ್ನಿ" ಎಂದು ಹೇಳಿದ. ಆಸಕ್ತಿ ತೋರಿ ಬಂದ ಪ್ರಜೆಗಳನ್ನು ಊರಾಚೆ ಕರೆದುಕೊಂಡು ಹೊರಟ. ಸ್ವಲ್ಪ ದೂರ ಸಾಗಿದ ನಂತರ, ಎಡಗಡೆ ಒಂದು ದೊಡ್ಡ ಬೆಟ್ಟ ಕಾಣಿಸಿತು. ಅದರ ಬಳಿ ತಾಮ್ರದ ನಾಣ್ಯಗಳ ರಾಶಿಯೇ ಇತ್ತು. ಕೆಲವು ಪ್ರಜೆಗಳು ಅವನ್ನು ಪಡೆಯಲು, ಆ ಕಡೆ ಧಾವಿಸಿದರು. ಮತ್ತೆ ಸ್ವಲ್ಪ ದೂರ ಹೋದನಂತರ, ಅವರ ಬಲಗಡೆಯ ಬೆಟ್ಟದಲ್ಲಿ ಬೆಳ್ಳಿ, ಬಂಗಾರದ ನಾಣ್ಯಗಳು ಥಳಥಳ ಹೊಳೆಯುತ್ತಿದ್ದುದನ್ನು ಕಂಡ ಜನರು, ಅವನ್ನು ಪಡೆಯಲು ಆ ಕಡೆಗೆ ಧಾವಿಸಿದರು. ಹೀಗೆ ಬಂದಿದ್ದ ಜನರ ಗುಂಪು ಕರಗಿತು.

ಇದಾವುದರ ಪರಿವೆಯೇ ಇಲ್ಲದೆ ರಾಜ ಮಾತ್ರ ಪರಮಾತ್ಮನನ್ನು ಮನದಲ್ಲಿ ಸ್ಮರಿಸುತ್ತ ನಡೆದಿದ್ದ. ಕೊನೆಗೆ ಉಳಿದವರು ರಾಜ ಮತ್ತು ಅವನ ರಾಣಿ ಮಾತ್ರ.

ಇನ್ನು ಸ್ವಲ್ಪ ದೂರ ಸಾಗಿದ ನಂತರ, ವಜ್ರ, ವೈಢೂರ್ಯ ಮತ್ತು ರತ್ನಗಳ ರಾಶಿಯೇ ಬೆಟ್ಟದಾಕಾರದಲ್ಲಿತ್ತು. ಕಣ್ಣು ಕೋರೈಸುವಂತೆ ಹೊಳೆಯುತ್ತಿದ್ದವು ಆ ವಜ್ರಗಳು. ಅದನ್ನು ಕಂಡ ರಾಣಿಯ ಮನಸ್ಸು ಆ ಕಡೆ ಓಡಿತು. ಲೋಭದಿಂದ ಅವಳೂ ಸಹ ಆ ಕಡೆಗೆ ತೆರಳಿದಳು.



ಉಳಿದವನು ರಾಜ ಮಾತ್ರ. ಆಗ ಅವನೆದುರು ದೇವರು ಬಂದು ದರ್ಶನವಿತ್ತ. ರಾಜನಿಗೆ ಮನತುಂಬಿ ಬಂದು ಸಂತೋಷದಿಂದ ಪ್ರಜೆಗಳಿಗೆ ದೇವರ ದರ್ಶನವಾಗುತ್ತಿದೆಯೇ ಎಂದು ಹಿಂತಿರುಗಿ ನೋಡಿದ. ಆದರೆ ಅವರಾರೂ ಅಲ್ಲಿರಲಿಲ್ಲ. ರಾಜನಿಗೆ ಅಚ್ಚರಿಯಾಯಿತು.

ಅದಕ್ಕೆ ಭಗವಂತ ಹೇಳಿದ, "ನೋಡು, ಎಲ್ಲರೂ ಪ್ರಾಪಂಚಿಕ ವಸ್ತುಗಳಲ್ಲಿ ಆಸಕ್ತಿ ಇಟ್ಟು ಆ ಕಡೆ ಓಡುವವರೇ. ನೀನು ರಾಜನಾಗಿದ್ದರೂ, ಎಲ್ಲವನ್ನೂ ಹೊಂದಿದ್ದರೂ, ಅದನ್ನು ಗಮನಿಸದೆ ನನ್ನನ್ನು ಸದಾ ಸ್ಮರಿಸುತ್ತಿದ್ದೆ. ಪವಿತ್ರವಾದ ಭಕ್ತಿ ಇದ್ದವರಿಗೆ ಮಾತ್ರ ನನ್ನ ದರ್ಶನ ಸಾಧ್ಯ. ಆದ್ದರಿಂದಲೇ ನಿನ್ನೆ ನೀನು ಜನರಿಗಾಗಿ ನನ್ನ ದರ್ಶನದ ವರವನ್ನು ಕೇಳಿದಾಗ ನಾನು ಮುಗುಳು ನಕ್ಕಿದ್ದು."

ಕಥೆ : ಪುಷ್ಪ ಶೇಷಾದ್ರಿ
ಕಲೆ : ಜೆ.ಸಿ. ಸಿದ್ದಲಿಂಗಯ್ಯ, ದಾವಣಗೆರೆ